# ‘ಮ್ಯಾಟ್ನಿ’ಯಲ್ಲಿ ಮತ್ತೆ ಒಂದಾದ ನೀನಾಸಂ ಸತೀಶ್-ರಚಿತಾ



‘ಸಂಜೆ ಮೇಲೆ ಸುಮ್ನೆ ಫೋನ್ ಮಾಡ್ಲ ನಿಂಗೆ...’ ಈಚೆಗೆ ಬಿಡುಗಡೆಯಾಗಿ, ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿಕೊಂಡ ಈ ಹಾಡಿನ ಸಿನಿಮಾ ಬಿಡುಗಡೆಯ ಹೊಸ್ತಿಲಿನಲ್ಲಿದೆ. ನೀನಾಸಂ ಸತೀಶ್ ಹಾಗೂ ರಚಿತಾ ರಾಮ್ ನಟನೆಯ ‘ಮ್ಯಾಟ್ನಿ’ ಸಿನಿಮಾ ಇನ್ನು ಕೆಲವೇ ದಿನಗಳಲ್ಲಿ ಪ್ರೇಕ್ಷಕರ ಮುಂದೆ ಬರಲಿದೆ.

‘ಅಯೋಗ್ಯ’ ಸಿನಿಮಾದಲ್ಲಿ ‘ಏನಮ್ಮಿ ಏನಮ್ಮಿ’ ಎಂದು ಹಾಡುತ್ತಾ ಪ್ರೇಕ್ಷಕರನ್ನು ರಂಜಿಸಿದ್ದ ಸತೀಶ್ ಹಾಗೂ ರಚಿತಾ ಜೋಡಿ ಮತ್ತೊಂದು ಪ್ರೀತಿಯ ಹಾಡು ಹಾಡಲು ತೆರೆಗೆ ಬರುತ್ತಿದೆ. ಮನೋಹರ್ ಆ್ಯಕ್ಷನ್ ಕಟ್ ಹೇಳಿರುವ ‘ಮ್ಯಾಟ್ನಿ’ ಸಿನಿಮಾ ಸೆಪ್ಟೆಂಬರ್‌ನಲ್ಲಿ ಬಿಡುಗಡೆ ಕಾಣಲಿದೆ. ಸಿನಿಮಾದಲ್ಲಿ ಮತ್ತೊಬ್ಬ ನಾಯಕಿಯಾಗಿ ಅದಿತಿ ಪ್ರಭುದೇವ ಕಾಣಿಸಿಕೊಳ್ಳುತ್ತಿದ್ದಾರೆ.

ಮ್ಯಾಟ್ನಿ ಬಗ್ಗೆ ಮಾತನಾಡಿರುವ ನೀನಾಸಂ ಸತೀಶ್, ‘ನಿರ್ದೇಶಕ ಮನೋಹರ್ ಅವರು ಈ ಚಿತ್ರದ ಕಥೆ ಹೇಳಿದಾಗ ತಕ್ಷಣ ಒಪ್ಪಿಕೊಂಡೆ. ರಚಿತಾ ರಾಮ್ ಹಾಗೂ ಅದಿತಿ ನನಗೆ ಜೋಡಿಯಾಗಿದ್ದಾರೆ. ಅಯೋಗ್ಯ ನಂತರ ಈ ಸಿನಿಮಾದಲ್ಲಿ, ನಾನು, ರಚಿತಾ ರಾಮ್ ಒಟ್ಟಿಗೆ ಅಭಿನಯಿಸುತ್ತಿದ್ದೇವೆ. ಸೆಪ್ಟೆಂಬರ್‌ನಲ್ಲಿ ಚಿತ್ರ ಬಿಡುಗಡೆಯಾಗಲಿದೆ’ ಎಂದಿದ್ದಾರೆ.

‘ಅದ್ಭುತವಾದ ತಾರಾಗಣ ಈ ಚಿತ್ರದಲ್ಲಿದೆ. ಇದರಲ್ಲಿ ನನ್ನ ಪಾತ್ರಕ್ಕೆ ಹೊಸ ಶೇಡ್ ಇದೆ’ ಎಂದು ಸಿನಿಮಾ ಬಗ್ಗೆ ಸಂತಸ ಹಂಚಿಕೊಂಡಿದ್ದಾರೆ ರಚಿತಾ ರಾಮ್. ಇನ್ನು ಕೆಲವೇ ದಿನಗಳಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದ್ದು, ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆಯುವ ಭರವಸೆ ಚಿತ್ರತಂಡದ್ದು.

# ಸಿನಿಮಾ ಜೊತೆಜೊತೆಯಲಿ ಮೇಘಾ ಶೆಟ್ಟಿ



ತ್ರಿಬಲ್ ರೈಡಿಂಗ್, ದಿಲ್ ಪಸಂದ್ ಸಿನಿಮಾಗಳ ಮೂಲಕ ಬೆಳ್ಳಿತೆರೆಯಲ್ಲಿ ಗುರುತಿಸಿಕೊಂಡಿರುವ ನಟಿ ಮೇಘಾ ಶೆಟ್ಟಿ, ಮತ್ತಷ್ಟು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಸದ್ಯ, ಅವರ ಅಭಿನಯದ ‘After ಆಪರೇಷನ್ ಲಂಡನ್ ಕೆಫೆ’ ಸಿನಿಮಾ ಚಿತ್ರೀಕರಣ ಮುಗಿದಿದ್ದು, ಬಿಡುಗಡೆಯ ಪಟ್ಟಿಯಲ್ಲಿದೆ.

‘ಜೊತೆಜೊತೆಯಲಿ’ ಧಾರಾವಾಹಿ ಮೂಲಕ ಕಿರುತೆರೆಗೆ ಪರಿಚಿತಗೊಂಡವರು ಮೇಘಾ. ಕಿರುತೆರೆಯ ಜನಪ್ರಿಯತೆ ಅವರನ್ನು ಬೆಳ್ಳಿತೆರೆಗೂ ಕರೆತಂದಿತು. ‘ತ್ರಿಬಲ್ ರೈಡಿಂಗ್’, ‘ದಿಲ್‌ಪಸಂದ್’ ಸಿನಿಮಾಗಳ ಮೂಲಕ ಚಂದನವನದಲ್ಲಿ ಹೆಜ್ಜೆಯೂರಿರುವ ಅವರ ಕೈಯಲ್ಲೀಗ ಮತ್ತೆರಡು ಸಿನಿಮಾಗಳಿವೆ.

‘After ಆಪರೇಷನ್ ಲಂಡನ್ ಕೆಫೆ’ ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದ್ದು, ಡಬ್ಬಿಂಗ್ ಹಂತದಲ್ಲಿದೆ. ಇನ್ನೇನು ಕೆಲವೇ ದಿನಗಳಲ್ಲಿ ತೆರೆಗೆ ಬರಲು ಸಜ್ಜಾಗುತ್ತಿದೆ.

ಮೇಘಾ ಅವರಿಗೆ ಚಿತ್ರತಂಡ ಇತ್ತೀಚೆಗೆ ಪೋಸ್ಟರ್ ಮೂಲಕ ಶುಭ ಹಾರೈಸಿದೆ. ಇದು ಆ್ಯಕ್ಷನ್ ಪ್ಯಾಕೇಜ್ ಚಿತ್ರವಾಗಿದ್ದು, ಕವೀಶ್ ಶೆಟ್ಟಿ ಮತ್ತು ಮೇಘಾ ಶೆಟ್ಟಿ ಮುಖ್ಯಪಾತ್ರಗಳಲ್ಲಿದ್ದಾರೆ. ಕನ್ನಡ, ಮರಾಠಿ, ಹಿಂದಿ, ತೆಲುಗು, ತಮಿಳು ಹಾಗೂ ಮಲೆಯಾಳಂ ಭಾಷೆಗಳಲ್ಲಿ ಈ ಸಿನಿಮಾ ತಯಾರಾಗುತ್ತಿದ್ದು, ಬಹುಭಾಷೆಗಳಲ್ಲಿ ತೆರೆಕಾಣುತ್ತಿರುವ ಈ ಸಿನಿಮಾ ಕುರಿತು ಮೇಘಾ ಶೆಟ್ಟಿ ಅವರಲ್ಲೂ ಉತ್ಸಾಹ ಹೆಚ್ಚಿದೆ. ಜಯತೀರ್ಥ ಅವರ ನಿರ್ದೇಶನದ ‘ಕೈವ’ ಸಿನಿಮಾ ಕೂಡ ಬಿಡುಗಡೆಯ ಸಿದ್ಧತೆಯಲ್ಲಿದೆ.

ಸಿನಿಮಾಗಳ ಜೊತೆಗೆ, ತಮ್ಮ ಫೋಟೊಶೂಟ್‌ಗಳ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಆಗಾಗ್ಗೆ ಹಂಚಿಕೊಳ್ಳುವ ಮೂಲಕವೂ ಮೇಘಾ ಶೆಟ್ಟಿ ಅಭಿಮಾನಿಗಳಿಗೆ ಹತ್ತಿರವಾಗಿದ್ದಾರೆ.